ಗುಣವಿಶೇಷತೆಯನ್ನು ಪಡೆದುಬರುತ್ತದೆ. ಹೀಗೆ ಏನೇನೊ ಜನ ಹೇಳುತ್ತಿದ್ದರು.

ದೇವಪ್ಪನ ಹೊಟೇಲಿನಲ್ಲಿ ಸೂಸಲಾ ತಿಂದ ಮೇಲೆ ನಿಜವಾಗಿಯೂ ಸ್ವರ್ಗಕ್ಕೆ ಕಿಚ್ಚು ಹಚ್ಚಬೇಕೆಂದು ಅನೇಕ ಗಿರಾಕಿಗಳು ಹೇಳುತ್ತಿದ್ದರು. ಮಲ್ಲೂರಿನ ಈ ಹೊಟೇಲಿನ ಸೂಸಲಾ ಮತ್ತು ಮಿರ್ಚಿ ಭಜಿ ಆ ಊರಿಗಷ್ಟೇ ಅಲ್ಲದೆ ಅಕ್ಕಪಕ್ಕದ ಗ್ರಾಮಗಳಲ್ಲಿಯೂ ಹೆಸರುವಾಸಿಯಾಗಿದ್ದವು. ಹಳ್ಳಿಗಳ ಕೆಲವರು ಈ ಸೂಸಲಾ ಕಟ್ಟಿಸಿಕೊಂಡು ಹೋಗಿ ಅದಕ್ಕೆ ಒಂದು ಸ್ಟಾರ್ ವ್ಯಾಲ್ಯೂ ತಂದುಕೊಟ್ಟಿದ್ದರು. ಈ ಸೂಸಲಾದ ಮತ್ತೊಂದು ವಿಶಿಷ್ಟತೆಯ ಬಹಳ ರಹಸ್ಯಮಯವಾದುದಾಗಿತ್ತು! ಪ್ರೇಮಿಗಳು ಈ ಚುರುಮುರಿ ವಗ್ಗರಣೆಯನ್ನು ಕಟ್ಟಿಸಿಕೊಂಡು ತಮ್ಮ ನಲ್ಲೆಯರಿಗೆ ಕೊಡುತ್ತಿದ್ದರು. ಹಳ್ಳದ ದಂಡೆಯಲ್ಲಿಯೋ, ಬೈಲಹೊಂಗಲದ ಸಿನಿಮಾ ಟಾಕೀಸಿನಲ್ಲಿಯೋ, ಬಸ್ಸಿನ ಹಿಂದಿನ ಸೀಟಿನಲ್ಲಿಯೋ, ಹೊಲದಲ್ಲಿ ಹತ್ತಿ ಬಿಡಿಸುವಾಗಲೋ, ಬಾವಿಯಿಂದ ನೀರು ತರುವಾಗಲೋ ಈ ಸೂಸಲಾ ಸವಿಯಲ್ಪಡುತ್ತಿತ್ತು. ಒಮ್ಮೊಮ್ಮೆ ಒಬ್ಬರಿಗೊಬ್ಬರು ಕದ್ದು ಮುಚ್ಚಿ ತಿನಿಸುತ್ತಿದ್ದರು. ಹೀಗಾಗಿ ಮಾಯಕ್ಕಳ ವಗ್ಗರಣಿ ಒಂದು ರೀತಿಯಲ್ಲಿ ಪ್ರೇಮಿಗಳನ್ನು ಬೆಸೆಯುವ ದಿವ್ಯೌಷಧಿಯಾಗಿತ್ತು! ತೋಯಿಸಿದ ಚುರುಮುರಿಯ ವಗ್ಗರಣೆಯಲ್ಲಿ ಅವರು ಯಾವುದೋ ಪುಡಿ ಹಾಕಿ ಮಾಟ ಮಾಡುತ್ತಾರೆಂತಲೂ ಅದಕ್ಕಾಗಿಯೇ ಒಮ್ಮೆ ತಿಂದವರು ಸೂಸಲಾ ವ್ಯಸನಕ್ಕೆ ಒಳಗಾಗಿ ತಮ್ಮ ಇದ್ದ ಆಸ್ತಿಪಾಸ್ತಿಯನ್ನೆಲ್ಲ ಕಳೆದುಕೊಂಡಿದ್ದಾರೆಂದೂ ಯಲ್ಲವ್ವನಂತಹವರು ತೆರಪಿಲ್ಲದೆ ಹೇಳುತ್ತಿದ್ದರು!

* * *

ಅವ್ವ ಅಣ್ಣನನ್ನು ಬೈಯ್ಯುವ ಕಾರಣ ತಿಳಿಯಲಿಕ್ಕೆ ಸಿದ್ದೂನಿಗೆ ಒಂದು ವರ್ಷ ಹಿಡಿಯಿತು. ಆಕೆ ಶಿವಾನಂದನನ್ನು ಬರೀ ಮಾಯಕ್ಕನ ಸಲುವಾಗಿ ಬೈಯುತ್ತಿಲ್ಲ. ಬದಲಾಗಿ ಹೊಲವನ್ನು ವಿನಾಕಾರಣ ಹಾಳುಗೆಡಹಿ ಅದರಲ್ಲಿ ಬೆಳೆ ಬರದ ಹಾಗೆ ಮಾಡಿದ್ದಾನೆ ಎಂಬುದು ಮುಖ್ಯ ಕಾರಣವಿರಬೇಕು. ಹೊಲವನ್ನು ಹಾಳು ಮಾಡಿದ್ದಕ್ಕೆ ಆಕೆಯ ಕೋಪ ಎಂದಿಗೂ ತಣಿಯುವಂತಿರಲಿಲ್ಲ. ಸಿದ್ದು ಅವ್ವನ ಜೊತೆ ದಿನಾಲೂ ಹೊಲಕ್ಕೆ ಬರತೊಡಗಿದ ಮೇಲೆ ಅವನಿಗೆ ತಮ್ಮ ಹೊಲ ಯಾವುದು, ಅದು ಎಷ್ಟು ಎಕರೆ ಇದೆ, ಯಾವ ಬೆಳೆ ಬೆಳೆಯುತ್ತಾರೆ, ಎಷ್ಟು ಪೀಕು ಬರುತ್ತದೆ, ಎಷ್ಟು ಹಾಳಾಗಿದೆ, ಬಾಜೂಕಿನ ಹೊಲದವರು ತಮ್ಮ ಭೂಮಿಯನ್ನು ಎಷ್ಟು ನುಂಗಿ ಹಾಕಿದ್ದಾರೆ, ಕಂದಾಯ ಎಷ್ಟು ಬಾಕಿ ಉಳಿದಿದೆ, ರಸ್ತೆಗೆ ಎಷ್ಟು ಹೊಲ ಹೋಗಿದೆ, ಇನ್ನೂ ಎಷ್ಟು ಹೋಗುವುದಿದೆ, ಬಂದ ರಾಶಿಯಲ್ಲಿ ಎಷ್ಟು ಕಳ್ಳತನವಾಗುತ್ತದೆ ಎಂಬುದೆಲ್ಲ ತಿಳಿದು ಒಂದು ರೀತಿಯಲ್ಲಿ ಕೋಪವೂ ಮತ್ತೊಂದು ರೀತಿಯಲ್ಲಿ ಭಯವೂ ಆಯಿತು. ತನಗೆ ಇಷ್ಟೆಲ್ಲ ನಿಭಾಯಿಸಲಿಕ್ಕೆ ಆಗುತ್ತದೆಯೆ? ಹೊಲ ಮಾಡುವುದೆಂದರೆ ತಾನು ತಿಳಿದುಕೊಂಡಷ್ಟು ಸರಳವಲ್ಲವೆಂಬ ಸತ್ಯ ಅವನಿಗೆ ಈಗ ಅರಿವಾಗತೊಡಗಿತು. ತಾನು ಮೊದಲು ಯಾವಾಗಲೋ ಒಂದು ಸಲ ಹೊಲಕ್ಕೆ ಬಂದಾಗ ಕೆಳಗಿನ ಹೊಲದ ಪಂಚಪ್ಪಕಾಕಾ, ಮೇಲಿನ ಗದ್ದೆಯ ಬಸವಣ್ಣೆಪ್ಪ, ಬಾಜೂಕಿನ ವಿಠ್ಠಲ, ಕೆರೆ ಮೇಲಿನ ಬಾವಾಸಾಬ ಎಷ್ಟು ಚೆಂದ ಮಾತಾಡುತ್ತಿದ್ದರು. ಆದರೆ ಈಗ ಅವರೆಲ್ಲ ಸಿದ್ದಣ್ಣನನ್ನು ವೈರಿಯಂತೆ ತಿಳಿದು ಕಂಡಲ್ಲಿ, ಕರೆದಲ್ಲಿ, ಬಂದಲ್ಲಿ ಅವನಿಗೆ ಹಲ್ಲು ಮಸೆಯುತ್ತಿರುತ್ತಾರೆ. ಸಿದ್ದುನ ಗೊಂಜಾಳದ ಹೊಲ ಕಾಲುವೆಯ ನೀರು ಉಣ್ಣುತ್ತಿದ್ದರೆ ಅದನ್ನು ಬಂದ್ ಮಾಡಿ ತಮ್ಮ ತೋಟಪಟ್ಟಿಗೆ ಬಿಡುತ್ತಾರೆ.

